ನಾವು' ತಣ್ಣನೆ ಎದ್ದ ಹುಸೇನ್, ಭಾಟಿಯಾನ ಕಾಲರ್‌ಪಟ್ಟಿ ಹಿಡಿದು ಮುಸುಡಿಯಿಂದ ರಕ್ತ ಬರುವಂತೆ ಗುದ್ದು ಹಾಕಿದ. 'ಅರೇ ಭೇಟಾ ಹಾಗೆಲ್ಲಾ ಹೊಡೀಬಾರ್ದು. ಅವರಿಗೇನು ಗೊತ್ತು ಇದೆಲ್ಲಾ, ನೆನ್ನೆ ಮೊನ್ನೆ ತಾನೇ ಎಂಜಿನಿಯರ್ ಆಗಿ ಬಂದು ಸೇರ್‍ಕೊಂಡೋರು. ಅದೇನೆ ಹೇಳ್ತಾರೆ ಕೇಳಿ ಬರುವಾ. ಸುಮ್ನೆ ಯಾಕೆ ರಕ್ತಾ ಹರಿಸೋದು' ಇಮಾಂಸಾಬರು ಹುಸೇನನನ್ನು ಸಮಾಧಾನಗೊಳಿಸಿ ಭಾಟಿಯಾನತ್ತ ತಿರುಗಿದವರೇ ಕಣ್ಣರಳಿಸಿದರು. 'ಅರೇ ಭೇಟಾ ನಿಂದೂ ರಕ್ತಾ ಕೆಂಪಗೇ ಇದೆ.' 'ಮತ್ತೆ ಇನ್ನು ಹೇಗೆ ಇರುತ್ತೆ...' ಕೋಪದಲ್ಲೂ ಭಾಟಿಯಾ ನರಳುತ್ತಾ ಎದ್ದು ನಿಂತು ನುಡಿದ. 'ನಮ್ಮ ರಕ್ತಾ ಎಲ್ಲ ಕಪ್ಪು, ಅಚ್ಚ ಕಪ್ಪು!' ಇಮಾಂರೂ ನೋವಿನ ಧ್ವನಿ ಹೊರಡಿಸಿದರು. 'ಈಸ್ ಇಟ್...' ಭಾಟಿಯಾ ಉದ್ಗಾರ ತೆಗೆದಾಗ, 'ಹೇ ಕುತ್ತೇ ಯಾಕೆ ಅಷ್ಟು ಅಚ್ಚರಿಪಡ್ತಿ ಇವೊತ್ತೇ ನೋಡುವಿಯಂತೆ ಈ ಕಪ್ಪಳ್ಳಿ ಜನರ ರಕ್ತಾ ಎಂಥಾ ಕಪ್ಪು ಅಂತ' ಹುಸೇನ್ ಕೆಂಪು ಕಣ್ಣು ಮಾಡಿ ನುಡಿದ.

ಭಾಟಿಯಾನೊಂದಿಗೆ, ಇಮಾಂಸಾಬರ ಜೊತೆಗೂಡಿದ ಹತ್ತು... ಹನ್ನೆರಡು ಮಂದಿಯ ಗುಂಪು ಪಂಚಾಯ್ತಿಕಟ್ಟೆ ಏರುವಾಗ, ಕಲರವಗಳೆಲ್ಲಾ ನಿಂತು ನಿಶ್ಯಬ್ದವಾಯಿತು.

'ಸದಾ ನೀವೇ ಕಾಲು ಕೆರ್ಕಂಡು ಜಗಳಕ್ಕೇ ಬರ್ತೀರಿ, ಕೊಚ್ಚೀರಿ, ತರೀತೀರಿ ಅಂತಿದ್ರಲ್ಲಾ ಗೌಡರೇ, ಈಗ ನನ್ನ ತಂಗೀನಾ ಕೊಚ್ಚದೆ, ತರಿಯದೆ, ಹ್ಞಾಂ, ಹೂಂ ಅನ್ನೋಕು ಅವಕಾಶ ಕೊಡದೆ ಹೇಗೆ ಮೇಲೆ ಕಳುಹಿಸಿಬಿಟ್ರಿ, ಈಗಲೂ ನಮ್ದೆ ತಪ್ಪೂಂತ ಹೇಳ್ತೀರಾ' ಹುಸೇನ್ ಎದೆ ಸೆಟೆಸಿ ಮುಂದೆ ನುಗ್ಗಿ ಬಂದು ನುಡಿದವ ಅಲ್ಲೆಲ್ಲಾ ಕಣ್ಣು ಆಡಿಸಿದ. 'ಎಲ್ಲಿ ಆ ಸಾನುಭೋಗ್ ಸಾಹೇಬಾ, ಇಲ್ಲಿ ತಪ್ಪಿಸ್ಕೊಂಡ ಅಂದ ಮಾತ್ರಕ್ಕೇ ಉಳ್ಕಂಡ ಅಂತಲ್ಲ, ಅವನ ವಂಶಾನಾ ಹುಟ್ಟಲಿಲ್ಲ ಅನ್ನಿಸ್‌ಬಿಡ್ತೀನಿ.' ಗುಡುಗಾಡುತ್ತಿದ್ದವನನ್ನು ಇಮಾಂಸಾಬರು ತಡೆದು ಕೂರಿಸಿದರು. ಗೌಡರು ಮೆಲ್ಲನೆ ಅವರತ್ತ ಜರುಗಿ ಮಾತನಾಡಲಾರಂಭಿಸಿದರು:

'ಬೆಂಕಿ ಇಲ್ಲದೇನೇ ಈ ಕಪ್ಪಳ್ಳಿ ಹೊತ್ತಿ ಉರೀತಿದೆ. ಬೆಂಕಿ ಇದ್ರಂತೂ ಕೇಳೋ ಹಂಗೇ ಇಲ್ಲ. ಸುಟ್ಟುದ್ದು ಪೊಟ್ಟಣ ಕಟ್ಟೋಕೂ ಒಂದು ನೊಣ ಇರಲ್ಲ. ನೀವು ನಿಮ್ಮ ಕಡೆಯೋರಿಗೆಲ್ಲಾ ವಸಿ ಬುದ್ಧಿ ಹೇಳಿ, ಎಲ್ಲಾ ಶಾಂತವಾಗಿ ನಡೀಲಿ. ಮೊದಲು ಪೊಲೀಸರಿಗೆ ಕಂಪ್ಲೇಂಟ್ ಕೊಡುವಾ. ಅವರೇ ಬಂದು ವಿಚಾರಿಸಿ ಯಾರಿಗ್ ಏನ್ ಶಿಕ್ಷೆ ಕೊಡ್ತಾರೋ ಕೊಡ್ಲಿ. ಸುಮ್ನೆ ನಾವು ನೀವು ಬಡಿದಾಡಿದ್ರೆ ಕಾರಣ ಇಲ್ಲದೋರಾ ಕಪ್ಪು ರಕ್ತಾ ಕಪ್ಪಳ್ಳಿ ಬೀದೀಲಿ ಹರ್ದು ಹೋಯ್ತದೆ. ಯಾರ್‍ಗೂ ಸುಖಾ ಇಲ್ಲದಂಗೆ ಆಯ್ತದೆ.'

ಗೌಡರ ಅನುಭವದ ಮಾತು ವೃದ್ಧ ಇಮಾಂಸಾಹೇಬರಿಗೆ ಹೌದೆನಿಸಿತ್ತು. ಆದರೆ ಹಾಗೆ ತಡೆಯುವ ಶಕ್ತಿ ತಮಗೆ ಇದೆಯೇ? ಒಬ್ಬ ಹುಸೇನನನ್ನು ತಡೆಯುವ ಮಾತೇ ಕಷ್ಟವಾಗಿರುವಾಗ ಇಂಥ ನೂರು ಹುಸೇನರನ್ನು ತಡೆಹಿಡಿಯುವ ಪರಿ ಹೇಗೆ? ಆರಂಭದಲ್ಲೇ ಆಗುವುದಿಲ್ಲವೆಂದು ಅಸಹಾಯಕರಾಗಿ ಕುಳಿತರೆ ಮತ್ತೂ ಅನಾಹುತಕ್ಕೆ ಆಹ್ವಾನ ಕೊಟ್ಟಂತೆ. ಅದರಿಂದಾಗುವ ಪರಿಣಾಮಗಳಿಗೆ ತಾವು ಬಾಧ್ಯಸ್ಥರಾಗಬೇಕಾಗುತ್ತದೆಂದು ಯೋಚಿಸುತ್ತಾ ಇಮಾಂಸಾಬರು 'ಹ್ಞೂಂ' ಎನ್ನಲೂ ಬಾಯಿ ಬರದೇ ಬರಿದೇ ತಲೆಯಾಡಿಸಿದ್ದರು.

★★★

ಸೂರ್ಯ ತನ್ನ ಪ್ರಖರ ಕಿರಣಗಳನ್ನು ಕಪ್ಪಳ್ಳಿಯ ಮೇಲೆ ಚೆಲ್ಲುವ ಸಮಯಕ್ಕಾಗಲೇ ಮೂರ್‍ನಾಲ್ಕು ವ್ಯಾನುಗಳು, ಜೀಪುಗಳು, ಸ್ಕೂಟರ್‌ಗಳು, ಕಾಕಿ ದಿರಿಸಿನ ಅಧಿಕಾರಿಗಳು ಬಂದು ಪೊಲೀಸ್ ರಾಜ್ಯ ಸ್ಥಾಪಿತವಾಗಿಬಿಟ್ಟಿತ್ತು. ಕಪ್ಪು ಕೆರೆಯ ಎಡಭಾಗದಲ್ಲಿ ಶಿವಲಿಂಗೇಗೌಡರು,